ಅಧ್ಯಕ್ಷರು : ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರ ಕೊಡಬೇಕು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅವರ ಕ್ಷೇತ್ರದ ಪೊಲೀಸ್‌ನವರ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಜಗದೀಶ್ ಶೆಟ್ಟರು ಮತ್ತು ಸದಸ್ಯರು ಹೇಳಿದ್ದಾರೆಂದು ತಿಳಿಸಿದ್ದಾರೆ. ಅಲ್ಲಿರುವಂತಹ ಪೊಲೀಸರು ಕಾನೂನು ಬಾಹಿರವಾಗಿ ನಡೆದುಕೊಂಡಿದ್ದಾರೆಂದು ಹೇಳಿದ್ದಾರೆ. ಇದರ ಬಗ್ಗೆ ಪೂರ್ಣ ಮಾಹಿತಿಯನ್ನು ತರಿಸಿ, ಆ ರೀತಿಯಾಗಿದ್ದರೆ, ಏನು ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಉತ್ತರವನ್ನು ಸದನದಲ್ಲಿ ಕೊಡುತ್ತೇವೆ.

ವಿಷಯ : ಶೃಂಗೇರಿ ಕ್ಷೇತ್ರದಲ್ಲಿ ಮಂಗನ ಕಾಯಿಲೆಯಿಂದ ತೊಂದರೆ ಇರುವಾಗ ಆಸ್ಪತ್ರೆಗಳಲ್ಲಿ ವೈದ್ಯರುಗಳು ಇಲ್ಲದಿರುವುದರ ಬಗ್ಗೆ.

ಶ್ರೀ ಡಿ.ಎನ್. ಜೀವರಾಜ್ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಎಲ್ಲಾ ಆಸ್ಪತ್ರೆಗಳಲ್ಲೂ ಡಾಕ್ಟರ್‌ಗಳು ಇಲ್ಲ. ಇಲ್ಲಿ ಡಾಕ್ಟರುಗಳು ಖಾಲಿಯಾಗಿದ್ದಾರೆಂದು ಹೇಳುವುದಕ್ಕಿಂತ ಇಲ್ಲಿ ಮಂಗನ ಖಾಯಿಲೆ ನಮ್ಮನ್ನು ಕಿತ್ತು ತಿನ್ನುತ್ತಾ ಇದೆ. ನಮ್ಮ ಮಾನ್ಯ ಸಚಿವರಿಗೆ ಪೂರ್ಣ ವಿಷಯ ಗೊತ್ತಿದೆ. ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಯವರಿಗೂ ಗೊತ್ತಿದೆ. ಇಲ್ಲಿ ನಾಲ್ಕು ಜನರು ಮಂಗನ ಖಾಯಿಲೆಯಿಂದ ಜೀವವನ್ನು ಕಳೆದುಕೊಂಡಿದ್ದಾರೆ, 250 ಜನರಿಗಿಂತ ಹೆಚ್ಚಿನ ಜನರು ಹೊರ ರೋಗಿಗಳಾಗಿ ಹೊರಗಡೆ ಇದ್ದಾರೆ. ಆಸ್ಪತ್ರೆಯ ತುಂಬಾ ಬೆಡ್‌ಗಳು ಖಾಲಿ ಇಲ್ಲದೇ, ಇರುವಷ್ಟು ರೋಗಿಗಳು ಇದ್ದಾರೆ. ಇಂತಹ ಮಂಗನ ಖಾಯಿಲೆ ಇರುವಂತಹ ಗಂಭೀರ ಸ್ಥಿತಿಯಲ್ಲೂ ಕೂಡ, ಎನ್.ಆರ್.ಪುರ ಆಸ್ಪತ್ರೆಯಲ್ಲಿ ಐದು ಜನ ವೈದ್ಯರು ಇರುವ ಜಾಗದಲ್ಲಿ, 5ಜನ ಡಾಕ್ಟರ್‌ಗಳು ಇಲ್ಲ. ಒಬ್ಬ ಡಾಕ್ಟರ್ ಅನ್ನು ಚಿಕ್ಕಮಗಳೂರಿನಿಂದ ತಾತ್ಕಾಲಿಕವಾಗಿ ನಿಯೋಜನೆ ಮಾಡಲಾಗಿದೆ. ಆ ಆಸ್ಪತ್ರೆಯಲ್ಲಿ ಒಬ್ಬ ಡಾಕ್ಟರ್ ಬಿಟ್ಟರೆ ಆ ಆಸ್ಪತ್ರೆಯಲ್ಲಿ ಡಾಕ್ಟರ್‌ಗಳು ಇಲ್ಲ. ಕಟ್ಟಿನಮನೆ ಎನ್ನುವ ಆಸ್ಪತ್ರೆ ಖಾಲಿ ಇದೆ. ಬಾಳೆ ಹೊನ್ನೂರು ಆಸ್ಪತ್ರೆಯಲ್ಲಿ ಒಬ್ಬರೇ ಡಾಕ್ಟರ್ ಇದ್ದಾರೆ. ಕೊಪ್ಪ ಆಸ್ಪತ್ರೆ ಮಾತ್ರ ಪರವಾಗಿಲ್ಲ. ಇನ್ನು ಶೃಂಗೇರಿ ಎನ್ನುವಂಥ ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಡಾಕ್ಟರ್ ಇಲ್ಲ. ನಮ್ಮ ಮಾನ್ಯ ಸಚಿವರು ನನ್ನ ಕ್ಷೇತ್ರಕ್ಕೆ 6 ಜನ ಡಾಕ್ಟರ್‌ಗಳನ್ನು ಪೇಪರ್‌ನಲ್ಲಿ ವರ್ಗಾವಣೆ ಮಾಡುವಂಥಾದ್ದು ಆಯಿತು. ಆ ವರ್ಗಾವಣೆಯ ಲಿಸ್ಟ್ ನನ್ನ ಕೈಗೂ ತಲುಪಿತು. ಆದರೆ ಆ ಆರು ಜನ ವೈದ್ಯರು

ಬರಲಿಲ್ಲ. ನಾನು ಒಂದು ದಿವಸ ಮಾನ್ಯ ಸಚಿವರನ್ನು ನೋಡಬೇಕೆಂದು, ಅವರ ಕಚೇರಿಗೆ ಹೋಗಿದ್ದೆ. ನನಗೆ ಮನಸ್ಸಿಗೆ ಭಾರೀ ದುಃಖವನ್ನು ಕೊಡುವಂತಹ ಘಟನೆಯೆಂದರೆ, ಅಲ್ಲಿ ಮಾನ್ಯ ಸಚಿವರು ಟ್ರಾನ್ಸಫರ್ ಮಾಡಿದಂತಹ ಇಬ್ಬರು ಡಾಕ್ಟರ್‌ಗಳು ನಿಂತಿದ್ದರು. ಅದು ಒಬ್ಬರು ಲಕ್ಷ್ಮಣ್ ನಾಯಕ್, ಇನ್ನೊಬ್ಬರು ರುದ್ರಿಬಾಯಿ ಎಂದು, ಅವರು ನನ್ನನ್ನು ನೋಡಿದ ಮೇಲೆ, ಇವರು ಶೃಂಗೇರಿಗೆ ಎಂ.ಎಲ್.ಎ. ಎಂದು ಹೇಳಿದ ಕೂಡಲೇ, ಅವರು ನನ್ನನ್ನು ಏನ್ರಿ ನಮ್ಮ ಹೊಟ್ಟೆಯ ಮೇಲೆ ಹೊಡೆಯುವಂತಹ ಕೆಲಸವನ್ನು ಏಕೆ ಮಾಡುತ್ತೀರಿ ? ಈ ಕೆಲಸವನ್ನು ಮಾಡುವುದಕ್ಕಿಂತ ಸುಮ್ಮನೆ ಇರಬಹುದಿತ್ತು, ಎಂದು ಒಬ್ಬರು ಅಂದರು. ಇನ್ನೊಬ್ಬರು ಈ ಕೆಲಸ ಮಾಡುವುದಕ್ಕಿಂತ ಏನಾದರೂ ಮಾಡಿ ನಮ್ಮ ತಲೆಯ ಮೇಲೆ ಕಲ್ಲನ್ನು ಹಾಕಿರಿ, ಎನ್ನುವಂತಹ ಪದಗಳನ್ನು ಹೇಳುವುದಕ್ಕೆ ಶುರು ಮಾಡಿದರು. ಆಗ ಸಚಿವರ ಕಚೇರಿಯಲ್ಲಿದ್ದಂತಹ ಅಧಿಕಾರಿಗಳು ತಾವು ದಯಮಾಡಿ ಮೊದಲು ಶಾಸಕರ ಹತ್ತಿರ ಕ್ಷಮೆಯನ್ನು ಕೇಳಿ, ಆಮೇಲೆ ಮುಂದಿನ ಮಾತನಾಡಿ ಎಂದು ಅವರಿಗೆ ಹೇಳಿದರು. ಈ ರೀತಿಯಲ್ಲಿ ನನಗೆ ಸಚಿವರ ಕಚೇರಿಯಲ್ಲಿ ಉತ್ತರ ಸಿಕ್ಕಿತು. ಇಷ್ಟು ಆದಮೇಲೂ ಶೃಂಗೇರಿಗೆ ಯಾವ ಡಾಕ್ಟರ್ ಬರಲಿಲ್ಲ. ಅವರು ಕೊನೆಗೆ ನನ್ನನ್ನು ಕ್ಷಮೆ ಕೇಳಿ ಹೋದರು, ಇದು ಬೇರೆ ವಿಷಯ. ಆದರೆ ಶೃಂಗೇರಿ ಕ್ಷೇತ್ರಕ್ಕೆ ಡಾಕ್ಟರ್ ಅನ್ನು ಹಾಕಿದರೆ, ಅವರು ಮಂಗನ ಖಾಯಿಲೆ ಬಂದಿದೆ ಎಂದರೆ, ಅವರು ನಮ್ಮನ್ನೆ ಮಂಗಗಳು ಎಂದುಕೊಂಡು ಬಿಟ್ಟಿದ್ದಾರೆ ? ಎಂಬ ಅನುಮಾನ ನನಗೆ ಇದೆ. ನಾನು ಮಾನ್ಯ ಸಚಿವರನ್ನು ಕೇಳುವುದೆನೆಂದರೆ ದಯಮಾಡಿ ನನ್ನ ಕ್ಷೇತ್ರದಲ್ಲಿರುವಂತಹ ಆಸ್ಪತ್ರೆಗಳಿಗೆ, ಯಾರನ್ನಾದರೂ ಇಂಜೆಕ್ಷನ್ ಕೊಡಲು ಬರುವಂತಹ ಡಾಕ್ಟರ್ ಅನ್ನು, ಟ್ರೀಟ್‌ಮೆಂಟ್ ಕೊಡಲು ಬರುವಂತಹ ಡಾಕ್ಟರ್‌ಗಳನ್ನು ಹಾಕಿ ಕೊಡಬೇಕೆಂದು ಒತ್ತಾಯ ಮಾಡುತ್ತೇವೆ. ಈ ಮಂಗನ ಖಾಯಿಲೆ ಎಂತಹ ಗಂಭೀರವಾದಂತಹ ಖಾಯಿಲೆ ಎಂದರೆ, ಎಂಥ ಗಟ್ಟುಮುಟ್ಟಾದ ವ್ಯಕ್ತಿ ಎರಡು, ಮೂರು ದಿನಗಳಲ್ಲಿ ಜೀವ ಕಳೆದುಕೊಳ್ಳುವಂಥಾದ್ದು ಇದೆ. ಈ ಖಾಯಿಲೆ ಬಡವರಿಗೆ ಬರುವಂಥಾದ್ದು ಸಾಹುಕಾರರಿಗೆ ಬರುವುದಿಲ್ಲ. ಆದುದರಿಂದ ದಯಮಾಡಿ ಈ ಬಡವರ ಬಗ್ಗೆ ಕರುಣೆ ಇರಲಿಯೆಂದು ನಾನು ಮಾನ್ಯ ಸಚಿವರಲ್ಲಿ ತಮ್ಮ ಮುಖಾಂತರ ಬೇಡಿಕೊಳ್ಳುತ್ತಿದ್ದೇನೆ.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೇ, ಶೃಂಗೇರಿ ತಾಲ್ಲೂಕು ವ್ಯಾಪ್ತಿಯಲ್ಲಿ 2004 ಮತ್ತು 2005ರಲ್ಲಿ ಫೆಬ್ರವರಿ ಅಂತ್ಯದವರೆಗೆ ಯಾವುದೇ ಮಂಗನ

ಖಾಯಿಲೆಯ ಪ್ರಕರಣಗಳು ವರದಿಯಾಗಿರುವುದಿಲ್ಲ. ಆದರೆ 2005ನೇ ಪ್ರಸಕ್ತ ಸಾಲಿನಲ್ಲಿ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಮಾತ್ರ ಮಂಗನ ಖಾಯಿಲೆಯಿಂದ ಮೂರು ಜನ ಮರಣ ಹೊಂದಿರುತ್ತಾರೆ. ಎನ್.ಆರ್.ಪುರ ತಾಲ್ಲೂಕಿನಲ್ಲಿ 2005ರಲ್ಲಿ ಫೆಬ್ರವರಿ ಅಂತ್ಯದವರೆಗೆ 149 ಸಂಕಿತ ಪ್ರಕರಣಗಳ ರಕ್ತ ಮಾದರಿಗಳನ್ನು ಪರೀಕ್ಷಿಸಿ 12ಮಂಗನ ಖಾಯಿಲೆ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಈ ಶಂಕಿತ ಮತ್ತು ಧೃಡಪಟ್ಟ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಿ ಗುಣಪಡಿಸಲಾಗಿದೆ. ಮರಣಗಳು ಸಂಭವಿಸಿರುವುದಿಲ್ಲ. ಮಂಗನ ಖಾಯಿಲೆಯು ಉತ್ತರ ಕನ್ನಡ ಜಿಲ್ಲೆಯ 2005ರಲ್ಲಿ ಇದುವರೆವಿಗೂ ಯಾವುದೇ ಧೃಡಪಟ್ಟ ಪ್ರಕರಣಗಳು ವರದಿಯಾಗಿರುವುದಿಲ್ಲ. ಆದರೆ ಶಂಕಿತ ರೋಗಿಗಳ ರಕ್ತದ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿ ಮಂಗನ ಖಾಯಿಲೆ ಇಲ್ಲವೆಂದು ದೃಢಪಡಿಸಲಾಗಿದೆ. ಈಗಾಗಲೇ ಎನ್.ಆರ್. ಪುರ ತಾಲ್ಲೂಕಿನ ಮದುಗುಣ ಮತ್ತು ಮೂಡಬಾಗಿಲು ಹಾಗೂ ಚಿಕ್ಕಮಗಳೂರು ತಾಲ್ಲೂಕಿನ ಕರಡಿ ಖಾನ್ ಕಾಫಿ ಎಸ್ಟೇಟ್‌ನಲ್ಲಿ ಒಂದೊಂದು ತಾತ್ಕಾಲಿಕ ಆಸ್ಪತ್ರೆಗಳನ್ನು ಸ್ಥಾಪಿಸಿ 24 ಗಂಟೆಗಳು ಚಿಕಿತ್ಸಾ ಸೌಲಭ್ಯ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಮಂಗನ ಖಾಯಿಲೆ ಅಲ್ಲಲ್ಲಿ ಬರುತ್ತಿದೆಯೆಂಬ ಸುಳಿವು ಸಿಕ್ಕತಕ್ಷಣವೇ, ಶಿವಮೊಗ್ಗದಲ್ಲಿ ಈಗಾಗಲೇ ಒಂದು ಪ್ರಯೋಗಶಾಲೆಯೂ ಇದೆ. ಇದು ನಡೆಯುತ್ತಿದೆ, ಮತ್ತು ಚಿಕ್ಕಮಗಳೂರಿನಲ್ಲಿ ಎರಡು, ಮೂರು ಕಡೆಗಳಲ್ಲಿ ಟೀಮ್‌ಗಳನ್ನು ಮಾಡಿ, ಈ ಭಾಗದ ಎಲ್ಲಾ ಜನರನ್ನು ಪರೀಕ್ಷೆ ಮಾಡಿ, ಅದಕ್ಕೆ ಟ್ರೀಟ್‌ಮೆಂಟ್ ಅನ್ನು ಕೊಡುವಂಥಾದ್ದು, ವ್ಯಾಕ್ಸಿನ್ ಸಪ್ಲೈ ನಿಂತು ಹೋಗಿತ್ತು. ಈ ವಿಚಾರ ಕಳೆದ ಅಧಿವೇಶನದಲ್ಲೂ ಪ್ರಸ್ತಾಪವಾಗಿತ್ತು. ಈ ವ್ಯಾಕ್ಸಿನ್ ಅನ್ನು ಸಪ್ಲೈ ಮಾಡಿ, ಅದರ ಬಗ್ಗೆ ಸಮಗ್ರವಾಗಿ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅತೀ ಹೆಚ್ಚು ಪ್ರಕರಣಗಳು ಕಂಡು ಬರುತ್ತಾ ಇಲ್ಲ. ಹಿಂದೆ ಮೂರು ಜನರ ಪ್ರಕರಣಗಳು ಬಿಟ್ಟರೆ, ಮತ್ತೆ ಯಾವುದೂ ಕಂಡು ಬರುತ್ತಿಲ್ಲ. ಆದರೆ ಮುನ್ನೆಚ್ಚರಿಕೆಯ ಕ್ರಮದ ಬಗ್ಗೆ ಎಲ್ಲರಿಗೂ ತೃಪ್ತಿ ಇದೆಯೆಂದು ಅಂದುಕೊಂಡಿದ್ದೇನೆ. ನಾನು ಚಿಕ್ಕಮಗಳೂರಿಗೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಸಂಬಂಧಪಟ್ಟಂತಹ ಅಧಿಕಾರಿಗಳೊಡನೆ ರಿವ್ಯೂ ಮಾಡಿದ್ದೇನೆ. ಇದಕ್ಕೋಸ್ಕರವೇ ಒಬ್ಬ ಆಫೀಸರ್ ಅನ್ನು ಹಾಕಿ, ಅವರಿಗೆ ಈ ಟೀಮ್‌ಗಳನ್ನು ಕೊಟ್ಟು ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದಾರೆ. ಇವರ ಆಸ್ಪತ್ರೆಗೂ ಸಹಿತ ಮೂರು ಜನ ಡಾಕ್ಟರ್‌ಗಳನ್ನು ನೇಮಕ ಮಾಡಿದ್ದೇನೆ. ಇದು ಆದಮೇಲೂ ಸಹಿತ ಮೊನ್ನೆ 3 ಜನ ಡಾಕ್ಟರ್‌ಗಳನ್ನು ಹಾಕಿದ್ದೇನೆ. ಮತ್ತೆ ಅದು ಆದಮೇಲೂ ಸಹ ಮೊನ್ನೆ 4 ಜನರಲ್ಲಿ 3 ಜನ ಡಾಕ್ಟರುಗಳನ್ನು ಅಲ್ಲಿಗೆ ನೇಮಿಸಿದ್ದೇವೆ. ಬಹುಶಃ ಅವರಿಗೆ ಒಂದು ವಾರದ ಹಿಂದೆ

ಕಳುಹಿಸಿದ್ದು, ಅವರಿಗೆ ಅದು ಹೋಗಿ ತಲುಪಿಲ್ಲವೆಂದು ತೋರುತ್ತದೆ. ಅವರು ಅಲ್ಲಿಗೆ ಬರುತ್ತಾರೆ.

ಶ್ರೀ ಡಿ.ಎನ್. ಜೀವರಾಜ್ : 4 ಜನ ಮಂಗನ ಕಾಯಿಲೆಯಿಂದ ತೀರಿಹೋಗಿದ್ದಾರೆ. ಬಹುಶಃ ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದ್ದರಿಂದ ಮಂಗನ ಕಾಯಿಲೆಯಿಂದ ಸತ್ತುಹೋಗಿರುವ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನಷ್ಟೆ.

ವಿಷಯ : ಹಾವೇರಿ ಜಿಲ್ಲೆಯಲ್ಲಿ ಮಹಿಕೊ ಕಂಪನಿ ವಿತರಿಸಿದ "ಚಮತ್ಕಾರ" ಹತ್ತಿ ಬೀಜದಿಂದ ಬೆಳೆಬಾರದೆ ರೈತರಿಗೆ ತೊಂದರೆ ಉಂಟಾಗಿರುವುದರ ಬಗ್ಗೆ.

ಶ್ರೀ ಶಿವರಾಜ ಸಜ್ಜನರ್ (ಹಾವೇರಿ) : ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಯಲ್ಲಿ ಸುಮಾರು 20 ಸಾವಿರ ಎಕರೆ ಪ್ರದೇಶದಲ್ಲಿ ಮಹಿಕೊ ಕಂಪನಿಯ "ಚಮತ್ಕಾರ" ಹತ್ತಿ ಬೀಜವನ್ನು ಬಿತ್ತಿದಂಥ ರೈತರು ಆ ಕಂಪನಿಯ ಕಳಪೆ ಮಟ್ಟ ಬೀಜದ ವಿತರಣೆಯಿಂದಾಗಿ ಯಾವುದೇ ಬೆಳೆ ಬಾರದೆ ಸಂಪೂರ್ಣವಾಗಿ ದಿವಾಳಿಯೆದ್ದು ಸುಮಾರು 3 ತಿಂಗಳಿನಿಂದ ಮಹಿಕೊ ಕಂಪನಿ ಎದುರುಗಡೆ ಹಾಗೂ ಹಾವೇರಿ ಜಿಲ್ಲಾಧಿಕಾರಿಗಳ ಕಚೇರಿ ಎದುರುಗಡೆ ಧರಣಿಯನ್ನು ಕೂಡ ಮಾಡಿದರು.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇದನ್ನು ದಯವಿಟ್ಟು ನಾಳೆಯ ದಿವಸ ಶ್ರೀ ಶ್ರೀನಿವಾಸಗೌಡರು ಸದನಕ್ಕೆ ಬಂದಾಗ ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಸದಸ್ಯರಿಗೆ ಅವಕಾಶ ಮಾಡಿಕೊಡಿ. ಈ ವಿಚಾರ ಬಹಳ ಮಹತ್ವದ್ದಾಗಿದೆ. ಮಾನ್ಯ ಕೃಷಿ ಸಚಿವರು ಈಗ ಸದನದಲ್ಲಿ ಇಲ್ಲ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಪ್ರಶ್ನೆ ಕೇಳಿದಾಗ ಆ ಸಂದರ್ಭದಲ್ಲಿ ಅದಕ್ಕೆ ಸಂಬಂಧಿಸಿದ ಮಂತ್ರಿಗಳು ಸದನದಲ್ಲಿ ಇರುತ್ತಾರೆನ್ನುವ ಖಾತ್ರಿ ಏನೂ ಇಲ್ಲವಲ್ಲ ಪಾಟೀಲರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಕೃಷಿ ಸಚಿವರು ಈಗ ಇಲ್ಲಿ ಇಲ್ಲ, ಬೇಕಾದರೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕೃಷಿ ಸಚಿವರು ಬಂದ ಮೇಲೆ ಅವರಿಂದ ಸ್ಟೇಟ್‌ಮೆಂಟ್ ಕೊಡಿಸುತ್ತೇವೆ. ಆದ್ದರಿಂದ ನಾಳೆ ಅವರು ಬಂದಾಗ ಇದನ್ನು ಪ್ರಸ್ತಾಪ ಮಾಡಿದರೆ ಒಳ್ಳೆಯದು.